## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 8(23) |
| ಸದಸ್ಯರ ಹೆಸರು | : ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 13.02.2023 |
| ಉತ್ತರಿಸುವ ಸಚಿವರು | : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲೆಗಳೆಷ್ಟು; (ಜಿಲ್ಲಾವಾರು ಅಂಕಿ ಅಂಶಗಳ ಮಾಹಿತಿ ನೀಡುವುದು). | ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಶಾಲೆಗಳ ಜಿಲ್ಲಾವಾರು ಅಂಕಿ ಅಂಶಗಳನ್ನು ಅನುಬಂಧ-01 ರಲ್ಲಿ ಲಗತ್ತಿಸಿದೆ. |
| ಆ. | ಶಾಲಾ ಮಕ್ಕಳ ಕಲಿಕಾ ಸಾಮಾರ್ಥ್ಯವನ್ನು ಹೆಚ್ಚಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; | **ಕಲಿಕಾ ಚೇತರಿಕೆ ಉಪಕ್ರಮ** 2022-2023<br>ಕೋವಿಡ್ 19 ಸಾಂಕ್ರಾಮಿಕದಿಂದಾಗಿ ಸತತ 2 ಶೈಕ್ಷಣಿಕ ವರ್ಷಗಳಲ್ಲಿ ಮಕ್ಕಳು ಸರಿಯಾಗಿ ಶಾಲೆಗೆ ಹಾಜರಾಗದೇ ಇದ್ದುದರಿಂದ ಹಿಂದಿನ ಎರಡು ತರಗತಿಗಳ ಕಲಿಕಾ ಸಾಮರ್ಥ್ಯಗಳ ಕಲಿಕೆಯಲ್ಲೂ ಮಕ್ಕಳಲ್ಲಿ ಹಿನ್ನಡೆ ಉಂಟಾಗಿರುವುದನ್ನು ಬೆಸೆಯಲು 2022–2023 ಶೈಕ್ಷಣಿಕ ವರ್ಷದಲ್ಲಿ "ಕಲಿಕಾ ಚೇತರಿಕೆ" ಉಪಕ್ರಮವನ್ನು ಜಾರಿಗೊಳಿಸಿದೆ.<br>ಹಿಂದಿನ ತರಗತಿಗಳ ಪ್ರಮುಖ ಕಲಿಕಾ ಸಾಮರ್ಥ್ಯಗಳನ್ನೂ ಒಳಗೊಂಡಂತೆ ಪ್ರಸ್ತುತ ಓದುತ್ತಿರುವ ತರಗತಿಯ ಪ್ರಮುಖ ಕಲಿಕಾ ಸಾಮರ್ಥ್ಯಗಳು (core competencies) ಹಾಗೂ ಬುನಾದಿ ಅಕ್ಷರಜ್ಞಾನ ಮತ್ತು ಸಂಖ್ಯಾಜ್ಞಾನಕ್ಕೆ ಸಂಬಂಧಿಸಿದ ಕಲಿಕಾಫಲಗಳನ್ನು ಅಂತರ್ಗತಗೊಳಿಸಿ 2022-2023 ನೇ ಸಾಲಿಗೆ ವಿಷಯಾವಾರು, ತರಗತಿವಾರು ಪರಿಷ್ಕೃತ ಕಲಿಕಾಫಲಗಳನ್ನು ಒಳಗೊಂಡ ಕಲಿಕಾ ಸಾಮಗ್ರಿಗಳನ್ನು (ಶಿಕ್ಷಕರಿಗೆ 140 ಶೀರ್ಷಿಕೆಗಳಲ್ಲಿ ಸುಗಮಕಾರರ ಕೈಪಿಡಿ ಹಾಗೂ ವಿದ್ಯಾರ್ಥಿಗಳ ಉಪಯೋಗಕ್ಕಾಗಿ 140 ಶೀರ್ಷಿಕೆಗಳಲ್ಲಿ ಕಲಿಕಾ ಹಾಳೆಗಳನ್ನು ಸಿದ್ಧಪಡಿಸಿದೆ) ಎಲ್ಲಾ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ತಲುಪಿಸಿದ್ದು, ಸಾಫ್ಟ್ ಪ್ರತಿಗಳನ್ನು ಡಿ.ಎಸ್.ಇ.ಆರ್.ಟಿ ವೆಬ್ ಸೈಟ್ ನಲ್ಲಿ ಅಳವಡಿಸುವ ಮೂಲಕ ಕಲಿಕಾ ಚೇತರಿಕೆಯನ್ನು ಸಾಧಿಸಲು ಕ್ರಮವಹಿಸಿದೆ.<br>• ತರಗತಿವಾರು ವಿಷಯಾವಾರು ನಿರ್ದಿಷ್ಟ ಕಲಿಕಾಫಲಗಳ ಅನ್ವಯ ಕಲಿಕೆಗಾಗಿ ಮೌಲ್ಯಮಾಪನ ಮತ್ತು ಕಲಿಕೆಯಾಗಿ ಮೌಲ್ಯಮಾಪನ ತಂತ್ರಗಳನ್ನು ಅಳವಡಿಸಿ ಕಲಿಕಾಸಾಮಗ್ರಿಗಳನ್ನು ಸಿದ್ಧಪಡಿಸಿದೆ.<br>• ಕಲಿಕಾ ಚೇತರಿಕೆ ಉಪಕ್ರಮದ ಅನುಪಾಲನೆಗಾಗಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಸಂದರ್ಶನ ನಮೂನೆಯನ್ನು ಸಿದ್ಧಪಡಿಸಿದೆ.<br>• ಮಕ್ಕಳು ಕಲಿಕಾಫಲಗಳನ್ನು ಸಾಧಿಸಿರುವುದನ್ನು ದೃಢಪಡಿಸಿಕೊಳ್ಳಲು ಶಿಕ್ಷರಿಗಾಗಿ ಹಾಗೂ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಕಾರ್ಯಕ್ರಮದ ಅನುಪಾಲನೆ ಮಾಡಲು ನಿರ್ದಿಷ್ಟ ಆಪ್‌ಅನ್ನು ಸಿದ್ಧಪಡಿಸಿ, ಅದನ್ನು ಬಳಸುವುದರ ಕುರಿತು ಮಾರ್ಗದರ್ಶನ ನೀಡಲಾಗುತ್ತಿದೆ. |

| | | |
|---|---|---|
| | | • ರಾಜ್ಯದಲ್ಲಿನ ಆದರ್ಶ ಶಾಲೆಗಳು, ಅನುದಾನಿತ ಶಾಲೆಗಳು, ಅನುದಾನರಹಿತ ಶಾಲೆಗಳು, ಏಕ ಶಿಕ್ಷಕ ಶಾಲೆಗಳಲ್ಲಿ ಹಾಗೂ ವಿವಿಧ ತರಗತಿಗಳಲ್ಲಿ ಕಲಿಕಾ ಚೇತರಿಕೆ ಕಾರ್ಯಕ್ರಮವನ್ನು ನಿರ್ವಹಿಸುವ ಕುರಿತು ಶಿಕ್ಷಕರ ಕೈಪಿಡಿಗಳನ್ನು ಸಿದ್ಧಪಡಿಸಲಾಗಿದೆ.<br>• ರಾಜ್ಯದಲ್ಲಿನ ಸರ್ಕಾರಿ ಶಾಲೆ ಹಾಗೂ ಅನುದಾನಿತ ಶಾಲಾ ಶಿಕ್ಷಕರಿಗೆ ಕಲಿಕಾ ಚೇತರಿಕೆ ಉಪಕ್ರಮವನ್ನು ತರಗತಿಗಳಲ್ಲಿ ನಿರ್ವಹಿಸುವ ಕುರಿತು ತರಬೇತಿ ನೀಡಲಾಗಿದೆ.<br>• ದೀಕ್ಷಾ ಪೋರ್ಟಲ್ ನಲ್ಲಿ ಕಲಿಕಾ ಚೇತರಿಕೆ ಉಪಕ್ರಮದಲ್ಲಿ ವಿವಿಧ ವಿಷಯಗಳಲ್ಲಿ ಕಲಿಕಾಫಲಗಳನ್ನು ಅನುಕೂಲಿಸುವ ಕುರಿತು ಪ್ರತ್ಯೇಕ ಕೋರ್ಸ್‌ಅನ್ನು ಅಳವಡಿಸಲಾಗಿದೆ. |
| ಇ. | ಸರ್ಕಾರಿ ಶಾಲೆ ಗುಣಮಟ್ಟ ಕುಸಿತಕ್ಕೆ ಕಾರಣಗಳೇನು; ಶಾಲೆಗಳಲ್ಲಿ ಶಿಕ್ಷಣ ನಿರೀಕ್ಷಿತ ಗುಣಮಟ್ಟ ತಲುಪದಿರಲು ಕಾರಣಗಳನ್ನು ಸರ್ಕಾರವು ಕಂಡು ಕೊಂಡಿದೆಯೇ; ಹಾಗಿದ್ದಲ್ಲಿ ಕಾರಣಗಳೇನು; ಇಲ್ಲದಿದ್ದಲ್ಲಿ ನಿರೀಕ್ಷಿತ ಗುಣಮಟ್ಟ ತಲುಪಲು ಸರ್ಕಾರದ ಯೋಜನೆಗಳೇನು; | **ಸಂಭ್ರಮ ಶನಿವಾರ** (ಬ್ಯಾಗ್ ರಹಿತ ದಿನ) : ವಿದ್ಯಾರ್ಥಿಗಳಲ್ಲಿ ಸರ್ವತೋಮುಖ ಬೆಳವಣಿಗೆ ಉಂಟು ಮಾಡಲು ಶಾಲೆಗಳಲ್ಲಿ ತಿಂಗಳಿಗೆ ಒಂದು ಶನಿವಾರದಂದು 'ಸಂಭ್ರಮ ಶನಿವಾರ'-ಬ್ಯಾಗ್ ರಹಿತ ದಿನ (BAG LESS DAY) ಆಚರಣೆ ಮಾಡಲು ಕ್ರಮವಹಿಸಿದೆ.<br><br>**ಇಂಗ್ಲಿಷ್ ಮಾಧ್ಯಮ ಶಾಲೆಗಳ ಶಿಕ್ಷಕರಿಗೆ ತರಬೇತಿ:** ಕರ್ನಾಟಕ ಸರ್ಕಾರವು ಸ್ಥಾಪಿಸಿರುವ 1000 ಇಂಗ್ಲಿಷ್ ಮಾಧ್ಯಮ ಶಾಲೆಗಳ ಶಿಕ್ಷಕರನ್ನು ಬಲಪಡಿಸಲು ವೃತ್ತಿಪರ ತರಬೇತಿಯನ್ನು ನೀಡಲಾಗುತ್ತಿದೆ.<br><br>**2022-23 ನೇ ಸಾಲಿನ ತರಬೇತಿ ಕಾರ್ಯಕ್ರಮದ ವಿವರಗಳು:**<br>• EMTIP 1,2,3 ಮತ್ತು 4 (6/8/8/8 ದಿನಗಳು) ತರಬೇತಿ ಕಾರ್ಯಕ್ರಮ.<br>• CLET 30 ದಿನಗಳ ತರಬೇತಿ ಕಾರ್ಯಕ್ರಮ<br>• ಶೈಕ್ಷಣಿಕ ಮಾರ್ಗದರ್ಶನ 5 ದಿನಗಳ ತರಬೇತಿ ಕಾರ್ಯಕ್ರಮ<br>• ಇಂಡಕ್ಷನ್ ಟ್ರೈನಿಂಗ್ ಪ್ರೋಗ್ರಾಂ 10 ದಿನಗಳ ತರಬೇತಿ ಕಾರ್ಯಕ್ರಮ<br>• ಸ್ಪೋಕನ್ ಇಂಗ್ಲೀಷ್ 14 ದಿನಗಳ ತರಬೇತಿ ಕಾರ್ಯಕ್ರಮ<br>• ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳಿಗಾಗಿ ಸ್ಪೋಕನ್ ಇಂಗ್ಲೀಷ್ MRP ತರಬೇತಿ<br>• 10 ನೇ ತರಗತಿ ಇಂಗ್ಲೀಷ್ ಭಾಷೆಯನ್ನು ಬೋಧಿಸುವ ಶಿಕ್ಷಕರಿಗೆ RIE ವತಿಯಿಂದ ಸಾಮರ್ಥ್ಯಾಭಿವೃದ್ಧಿಯ ತರಬೇತಿ ನೀಡಲಾಗಿದೆ.<br>• **ಆಲೂರು ವೆಂಕಟರಾವ್ ಭಾಷಾ ಕೌಶಲ್ಯ ತರಬೇತಿ.**<br>• **ನಿಷ್ಠಾ ತರಬೇತಿಗಳು.**<br>• **2022-23 ನೇ ಸಾಲಿನ ಎಸ್.ಎಸ್.ಕೆ ಪ್ರಾಥಮಿಕ ವಿಭಾಗದ ಗುರುಚೇತನ ಕಾರ್ಯಕ್ರಮ**<br>• **IISc ವತಿಯಿಂದ ಪ್ರೌಢಶಾಲಾ ಶಿಕ್ಷಕರ ತರಬೇತಿ.**<br>• **ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮ (TALP).**<br>• **ಇ-ಕಂಟೆಂಟ್ ಲಭ್ಯತೆ (ದೀಕ್ಷಾ ಪೋರ್ಟಲ್).**<br>• **ಎನರ್ಜೈಸ್ಡ್ ಪಠ್ಯ ಪುಸ್ತಕಗಳು**: Energised Text Books |
| ಈ. | ಶಾಲಾ ಮಕ್ಕಳಿಗೆ ಅವಶ್ಯಕವಾಗಿ ಬೇಕಾದ ಜ್ಞಾನ, ಕೌಶಲ್ಯಗಳು ಮತ್ತು ಮೌಲ್ಯಗಳನ್ನು | 2022-23ನೇ ಸಾಲಿನಲ್ಲಿ ಜೀವನ ವಿಜ್ಞಾನ ಆನ್‌ಲೈನ್ ಕೋರ್ಸ್ ಅನ್ನು ಶಿಕ್ಷಕರು, ಪೋಷಕರು ಮತ್ತು ವಿದ್ಯಾರ್ಥಿಗಳಿಗಾಗಿ ರೂಪಿಸಲಾಗಿದೆ, ಸಮಾಜದ ಎಲ್ಲರೂ |

<table>
<tr>
<td></td>
<td>ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರದ ಕಾರ್ಯ ಯೋಜನೆಗಳೇನು;</td>
<td>ಜೀವನ ಕೌಶಲ್ಯಗಳನ್ನು ಅರ್ಥಮಾಡಿಕೊಂಡು, ಅವುಗಳನ್ನು ರೂಢಿಸಿಕೊಂಡು ಉತ್ತಮ ನಾಗರೀಕ ಸಮಾಜ ನಿರ್ಮಾಣಕ್ಕೆ ಕಾರಣೀಭೂತರಾಗಬೇಕೆಂಬ ಆಶಯಗಳನ್ನು ಈ ಮಾಡ್ಯೂಲ್ ಹೊಂದಿದೆ.<br><br>ಜೀವನ ಕೌಶಲ್ಯಗಳ ವ್ಯಾಪ್ತಿ ಮತ್ತು ವಿಷಯ ವಸ್ತು ಆಗಾಧವಾದದ್ದು, ಹಾಗಾಗಿ ಪ್ರಮುಖವಾಗಿ ರೂಢಿಸಿಕೊಳ್ಳಬೇಕಾದ ಜೀವನ ಮೌಲ್ಯಗಳಿಗೆ ಒತ್ತನ್ನು ನೀಡಿ, ಅವುಗಳನ್ನು ಐದು ಪ್ರಮುಖ ತತ್ವಗಳ ಅಡಿಯಲ್ಲಿ ನೀಡಲಾಗಿದೆ.<br><br>ಕರ್ನಾಟಕ ಜೀವನ ವಿಜ್ಞಾನ ಅಕಾಡೆಮಿ ಮತ್ತು ಅಣುವ್ರತ ಸಮಿತಿ ಬೆಂಗಳೂರು ರವರ ಸಹಯೋಗದಲ್ಲಿ ಜೀವನ ವಿಜ್ಞಾನ ಸಂಪನ್ಮೂಲಗಳನ್ನು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿಗಳ ತಂಡದೊಂದಿಗೆ ಸೃಜಿಸಿದೆ.<br><br>ಸದರಿ ಕೋರ್ಸ್ ಅನ್ನು ಶಿಕ್ಷಕರು, ಪೋಷಕರು ಮತ್ತು ವಿದ್ಯಾರ್ಥಿಗಳಿಗೆ ದಿ:20.03.2023 ರ ವರೆಗೆ ಆನ್‌ಲೈನ್ ನಲ್ಲಿ ತರಬೇತಿ ಪಡೆಯಲು ಅನುವು ಮಾಡಿಕೊಡಲಾಗಿದೆ. 2019-20 ಹಾಗೂ 2020-21ನೇ ಸಾಲಿನಲ್ಲಿ ಒಟ್ಟು 15896+14930=30826 ಶಿಕ್ಷಕರಿಗೆ ಜೀವನ ಕೌಶಲ ತರಬೇತಿಯನ್ನು ನೀಡಲಾಗಿದೆ. ಈ ಮೂಲಕ ಶಿಕ್ಷಕರ ಬಲವರ್ಧನೆ ಮಾಡಿ ತರಗತಿ ಪ್ರಕ್ರಿಯೆಗಳಲ್ಲಿ ಜೀವನ ಕೌಶಲ ಅಭಿವೃದ್ಧಿಪಡಿಸಲು ಅನುವುಮಾಡಿಕೊಡಲಾಗಿದೆ.</td>
</tr>
<tr>
<td>ಉ.</td>
<td>ಶಾಲಾ ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರದ ಯೋಜನೆಗಳು ಸಫಲತೆಯನ್ನು ಕಂಡು ಕೊಂಡಿದೆಯೇ; ಹಾಗಿದ್ದಲ್ಲಿ, ವಿವರವಾದ ಅಂಕಿ-ಅಂಶಗಳೊಂದಿಗೆ ಮಾಹಿತಿ ಒದಗಿಸುವುದು.</td>
<td>ಕಳೆದ ಮೂರು ವರ್ಷಗಳ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿನ 1-10 ನೇ ತರಗತಿಗಳ ವಿದ್ಯಾರ್ಥಿಗಳ ಒಟ್ಟು ದಾಖಲಾತಿ ಅಂಕಿ-ಅಂಶಗಳನ್ನು ಪರಿಶೀಲಿಸಲಾಗಿ, 2020-21 ನೇ ಸಾಲಿಗೆ ಹೋಲಿಸಿದಲ್ಲಿ, 2021-22 ನೇ ಸಾಲಿನ ದಾಖಲಾತಿಯಲ್ಲಿ ಒಟ್ಟು ಶೇ. 5.5 ರಷ್ಟು ಹೆಚ್ಚಳ ಕಂಡುಬಂದಿರುತ್ತದೆ. 2021-22 ನೇ ಸಾಲಿಗೆ ಹೋಲಿಸಿದಲ್ಲಿ, 2022-23 ನೇ ಸಾಲಿನ ದಾಖಲಾತಿಯಲ್ಲಿ ಶೇ. 2.8 ರಷ್ಟು ಇಳಿಕೆ ಕಂಡು ಬಂದಿರುತ್ತದೆ. ಒಟ್ಟಾರೆಯಾಗಿ ಕಳೆದ ಮೂರು ವರ್ಷಗಳಲ್ಲಿ ಈ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಸ್ಥಿರತೆ ಕಂಡು ಬಂದಿರುತ್ತದೆ. ಈ ಹಿನ್ನಲೆಯಲ್ಲಿ ಶಾಲಾ ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರದ ಯೋಜನೆಗಳು ಸಫಲತೆಯನ್ನು ಕಂಡುಕೊಂಡಿರುತ್ತದೆ.<br><br>
<table>
<tr><th>ಕ್ರ.ಸಂ</th><th>ವರ್ಷ</th><th>ಒಟ್ಟು ತರಗತಿಗಳು</th><th>ಒಟ್ಟು ದಾಖಲಾತಿ</th></tr>
<tr><td>1.</td><td>2020-21</td><td>1-10</td><td>56,56,999</td></tr>
<tr><td>2.</td><td>2021-22</td><td>1-10</td><td>59,71,015</td></tr>
<tr><td>3.</td><td>2022-23</td><td>1-10</td><td>58,03620</td></tr>
</table>
<br>ವಿವರವಾದ ಅಂಕಿ-ಅಂಶಗಳನ್ನು ಅನುಬಂಧ-02 ರಲ್ಲಿ ಲಗತ್ತಿಸಿದೆ.</td>
</tr>
</table>

**ಸಂಖ್ಯೆ: ಇಪಿ 03 ಪಿಎಂಎ 2023**

**(ಬಿ.ಸಿ. ನಾಗೇಶ್)**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ**
**ಸಕಾಲ ಸಚಿವರು**

ಅನುಬಂಧ-೧

| DEPARTMENT OF PUBLIC INSTRUCTIONS | | |
|---|---|---|
| SATS SECTION | | |
| ***ಚುಕ್ಕೆ ಗುರುತಿನ ಸಂಖ್ಯೆ:23(1)*** | | |
| ***District wise Primary and Secondary Govt school count*** | | |
| ***District name*** | ***Primary schools*** | ***Secondary schools*** |
| BAGALKOT | 1244 | 189 |
| BALLARI | 552 | 115 |
| BELAGAVI | 1356 | 137 |
| BELAGAVI CHIKKODI | 1731 | 193 |
| BENGALURU RURAL | 1057 | 64 |
| BENGALURU U NORTH | 479 | 57 |
| BENGALURU U SOUTH | 844 | 89 |
| BIDAR | 1214 | 167 |
| CHAMARAJANAGARA | 738 | 86 |
| CHIKKABALLAPURA | 1418 | 111 |
| CHIKKAMANGALURU | 1304 | 116 |
| CHITRADURGA | 1630 | 115 |
| DAKSHINA KANNADA | 896 | 170 |
| DAVANAGERE | 1066 | 135 |
| DHARWAD | 737 | 110 |
| GADAG | 583 | 115 |
| HASSAN | 2189 | 241 |
| HAVERI | 1131 | 153 |
| KALBURGI | 1705 | 295 |
| KODAGU | 372 | 47 |
| KOLAR | 1776 | 124 |
| KOPPAL | 913 | 170 |
| MANDYA | 1556 | 217 |
| MYSURU | 1843 | 232 |
| RAICHUR | 1380 | 226 |
| RAMANAGARA | 1199 | 107 |
| SHIVAMOGGA | 1818 | 164 |
| TUMAKURU | 1994 | 132 |
| TUMAKURU MADHUGIRI | 1242 | 95 |
| UDUPI | 575 | 106 |
| UTTARA KANNADA | 926 | 49 |
| UTTARA KANNADA SIRSI | 1101 | 75 |
| VIJAYANAGARA | 977 | 130 |
| VIJAYAPURA | 1795 | 158 |
| YADAGIRI | 893 | 144 |
| ***Total*** | ***42234*** | ***4834*** |

ಅನುಬಂಧ-02

## 3 years GOVT and AIDED Class wise Enrollment

| Academic year | 2020-21 | | | 2021-22 | | | 2022-23 | | |
|---|---|---|---|---|---|---|---|---|---|
| management | Department of Education | Government Aided | Total | Department of Education | Government Aided | Total | Department of Education | Government Aided | Total |
| Class 1 | 470607 | 63143 | 533750 | 620619 | 83643 | 704262 | 461385 | 67867 | 529252 |
| Class 2 | 450860 | 74102 | 524962 | 501436 | 65422 | 566858 | 573399 | 82703 | 656102 |
| Class 3 | 474745 | 75285 | 550030 | 495839 | 75663 | 571502 | 485514 | 66645 | 552159 |
| Class 4 | 458567 | 73843 | 532410 | 512413 | 76679 | 589092 | 492529 | 76728 | 569257 |
| Class 5 | 508184 | 83030 | 591214 | 489919 | 77126 | 567045 | 511235 | 79699 | 590934 |
| Class 6 | 515412 | 94954 | 610366 | 503404 | 88866 | 592270 | 451518 | 84893 | 536411 |
| Class 7 | 489181 | 97336 | 586517 | 504860 | 93202 | 598062 | 496071 | 92428 | 588499 |
| Class 8 | 385551 | 206224 | 591775 | 401057 | 209304 | 610361 | 385251 | 213956 | 599207 |
| Class 9 | 330453 | 254266 | 584719 | 346770 | 249246 | 596016 | 359174 | 256161 | 615335 |
| Class 10 | 304414 | 246842 | 551256 | 327721 | 247826 | 575547 | 329673 | 236791 | 566464 |
| Grand Total | 4387974 | 1269025 | 5656999 | 4704038 | 1266977 | 5971015 | 4545749 | 1257871 | 5803620 |